

ಬೀಚಿ, ನಾ. ಕಸ್ತೂರಿ, ಶ್ರೀರಂಗ ಮುಂತಾದವರು ಅನೇಕ ವಿನೋದಮಯ ಸಾಹಿತ್ಯ ಸೃಷ್ಟಿ ಮಾಡಿದ್ದರೂ, ಎಲ್ಲರೂ ಹಾಸ್ಯವನ್ನು ವಿಷಾದ, ವಿಡಂಬನೆ, ವ್ಯಂಗ್ಯಕ್ಕೆ ಬಳಸಿಕೊಂಡಿದ್ದೇ ಹೆಚ್ಚು. ಕೈಲಾಸಂರಂತೂ ಅದರಲ್ಲಿ ಎತ್ತಿದ ಕೈ. 'ಎಕ್ಕಡದಂತೆ ಇದ್ದೂ ಬೂಟ್ಸಿನಂತೆ ಕಟ್ಟಬಹುದಾದ ಚಪ್ಪಲಿಗೆ ಎಕ್ಕಡದ ಎಲಿಗೆನ್ಸೂ ಬೂಟ್ಸಿನ ಬಡಾಯಿಯೂ ಇದೆ' ಎನ್ನುವ ಅವರ ಸಾಲನ್ನು ನಾವು ತೇಲುಮಾತಿನ ತಮಾಷೆಗೆ ಸೀಮಿತಗೊಳಿಸಲಾಗುವುದಿಲ್ಲ.

***

ನವರಸಗಳಲ್ಲಿ ಹಾಸ್ಯಕ್ಕಿರುವಷ್ಟು ಬಹುಮುಖ ಪ್ರವರ್ತನೆ ಉಳಿದ ರಸಗಳಿಗಿಲ್ಲ. ವಿವಿಧ ರಸಗಳ ಮುಖಾಂತರವೂ ಹಾಸ್ಯರಸವನ್ನು ಹೊಮ್ಮಿಸಬಹುದಾದಂತೆ, ಹಾಸ್ಯದ ಮುಖೇನವೂ ಇತರೆ ರಸಗಳನ್ನು ಸ್ಫುರಿಸಬಹುದಾದ ಸಾಧ್ಯತೆಯಿದೆ. ಚಾರ್ಲಿ ಚಾಪ್ಲಿನ್ ಈ ಸಂದರ್ಭಕ್ಕೆ ಒದಗಬಹುದಾದ ಸುಲಭದ ಉದಾಹರಣೆ. ಆತ ಪ್ರಸ್ತುತಪಡಿಸುವ ಹಾಸ್ಯ ನಗೆಯನ್ನು ಉಕ್ಕಿಸುವುದಕ್ಕಿಂತ ಹೆಚ್ಚಾಗಿ ಸಂಕಟ, ಹತಾಶೆ, ಅನುಕಂಪಗಳನ್ನೇ ಕರುಣಿಸುತ್ತದೆ. ಖುಷಿ ಹಾಗೂ ದುಃಖದ ನಡುವಿನ ಗೆರೆ ಬಹಳ ತೆಳು ಎಂಬುದನ್ನೂ ತೋರಿಸಿಕೊಡುತ್ತವೆ.

ತೇಜಸ್ವಿಯವರ 'ನಗು' ಎನ್ನುವ ಕಥೆಯನ್ನು ನೆನಪಿಸಿಕೊಳ್ಳೋಣ. ಅಲ್ಲಿ – ಪಾಠದ ನಡುವೆ ನಕ್ಕ ವಿದ್ಯಾರ್ಥಿಯೋರ್ವನಿಗೆ, ಕ್ಲಾಸು ಮುಗಿದ ಮೇಲೆ ಜೋರಾಗಿ ನಗುವ ಶಿಕ್ಷೆ ನೀಡುತ್ತಾಳೆ ಶಿಕ್ಷಕಿ. ಖಾಲೀ ಕೋಣೆಯಲ್ಲಿ, ಅದೂ ಒಬ್ಬನೇ ಹೇಗೆ ನಗುವುದೆಂದು ತಿಳಿಯದೇ ತಬ್ಬಿಬ್ಬಾಗುತ್ತಾನೆ ಆ ಹುಡುಗ. ಶಿಕ್ಷಕಿ ಪಟ್ಟುಬಿಡುವುದಿಲ್ಲ. ಆಕೆಯ ಭಯಕ್ಕೆ ನಗುವಂತೆ ನಾಟಕ ಮಾಡುವ ಹುಡುಗ ನಂತರ ಏನೇನೋ ಯೋಚಿಸುತ್ತ ನಿಜವಾಗಲೂ ಜೋರಾಗಿ ನಗಲಾರಂಭಿಸುತ್ತಾನೆ. ಕಥೆ ಮುಂದುವರಿಯುತ್ತ; ನಡುವೆ ಶಿಕ್ಷಕಿ ತಡೆಯಲಾರದಂತೆ ಅಳುವುದೂ, ಹುಡುಗನೂ ಅಳುವುದೂ, ನಂತರ ಇಬ್ಬರೂ ಸೇರಿ ನಗುವುದೂ, ಕ್ರಮೇಣ ಅವರಿಬ್ಬರಿಗೂ ತಾವು ನಗುತ್ತಿರುವುದೇ ಸುಳ್ಳೆನಿಸತೊಡಗುವ ಪ್ರಸಂಗಗಳು ಜರುಗುತ್ತವೆ. ಹೀಗೆ 'ನಗು' ಎನ್ನುವುದನ್ನು ಕೇಂದ್ರವಾಗಿಟ್ಟುಕೊಂಡ ಈ ಕಥೆ ವಿಷಾದ, ವ್ಯಂಗ್ಯ, ಶೋಕ, ಕರುಣೆ, ದ್ವಂದ್ವ ಹೀಗೆ ಹಲವು ಭಾವಗಳ ಕಾಣ್ಕೆಯನ್ನು ನೀಡುತ್ತದೆ. ಹಾಸ್ಯಕ್ಕಿರುವ ಹಲವು ರಸಸಾಧ್ಯತೆಗಳನ್ನು ಗುರುತಿಸುತ್ತಲೇ, ಈ ಕಥೆಯಲ್ಲಿ ಹಾಸ್ಯವೆಂಬುದು ಮುಖ್ಯ ಮುದ್ದೆಯಾಗಿಲ್ಲ ಎಂಬುದನ್ನೂ ಗಮನಿಸಬಹುದು.